ಭಾರತ ಸರ್ಕಾರದಲ್ಲಿ ಇನ್ನೂ ಇತ್ಯರ್ಥವಾಗದೆ ಉಳಿದಿರುವ ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಪ್ರಸ್ತಾವನೆಗಳು

೬೫೯. ಶ್ರೀ ಆರ್. ವಿ. ದೇಶಪಾಂಡೆ (ಹಳಿಯಾಳ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕರ್ನಾಟಕ ಸರ್ಕಾರದ ಪ್ರವಾಸೋದ್ಯಮ ಇಲಾಖೆಯ ಪ್ರಸ್ತಾವನೆಗಳು ಭಾರತ ಸರ್ಕಾರದಲ್ಲಿ ಇತ್ಯರ್ಥವಾಗದೇ ಉಳಿದ ಪ್ರಕರಣಗಳೆಷ್ಟು ?

ಆ) ಈವರೆವಿಗೂ ಯಾವ ಸಾಲಿನಿಂದ ಬಾಕಿ ಇರುತ್ತದೆ ?

ಇ) ಈ ನಿಟ್ಟಿನಲ್ಲಿ ಸರ್ಕಾರ ಇತ್ಯರ್ಥಗೊಳಿಸಲು ಕೈಗೊಂಡ ಕ್ರಮ ಏನು ?

ಶ್ರೀ ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನೆ ಮತ್ತು ಪ್ರವಾಸೋದ್ಯಮ ಸಚಿವರು).—

ಅ) ೧೯೯೦-೯೧ನೇ ವರ್ಷದ ಯೋಜನೆಗಳು	...	೧೫
ಇತರೆ ಪ್ರಸ್ತಾವನೆಗಳು	...	೨೧
	ಒಟ್ಟು	೩೬

ಆ) ೧೯೯೦-೯೧ನೇ ಸಾಲಿನ ಯೋಜನೆ ಪ್ರಸ್ತಾವನೆಗಳು ಫೆಬ್ರವರಿ ೧೯೯೦ ರಿಂದ ಇತರೆ ಪ್ರಸ್ತಾವನೆಗಳು ೧೯೮೭-೮೮ ರಿಂದ ಬಾಕಿ ಇರುತ್ತವೆ.

ಇ) ಭಾರತ ಸರ್ಕಾರಕ್ಕೆ ಕಾಲಕಾಲಕ್ಕೆ ನೆನಪೋಲೆಗಳನ್ನು ಬರೆಯಲಾಗುತ್ತಿದೆ.

ಅಧ್ಯಕ್ಷರು.—ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸಲಾಯಿತು.

ಸಭೆಯ ಮುಂದಿಡಲಾದ ಕಾಗದ ಪತ್ರಗಳು

ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಮಾನ್ಯ ಲೋಕೋಪಯೋಗಿ ಮತ್ತು ನೀರಾವರಿ ಸಚಿವರು).—ಮಾನ್ಯ ಅಧ್ಯಕ್ಷರೇ, ಹೇಮಾವತಿ ಆಣೆಕಟ್ಟಿಗೆ ಸಂಬಂಧಿಸಿದಂತೆ ಬಾಗೂರು ನವಿಲೆ ಸಂರಂಗದ ಬಗ್ಗೆ ನ್ಯಾಯಾಧೀಶರಾದ ಶ್ರೀ ಎಂ. ಸದಾನಂದ ಸ್ವಾಮಿ ವಿಚಾರಣಾ ಆಯೋಗದ ವರದಿಯನ್ನು ನಾನು ಸಭೆಗೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಒಪ್ಪಿಸಲಾಗಿದೆ.

ಅರ್ಜಿಗಳನ್ನು ಒಪ್ಪಿಸುವುದು

ಶ್ರೀ ಜಿ. ಎಸ್. ಆಚಾರ್.—ದಕ್ಷಿಣ ಕನ್ನಡ ಜಿಲ್ಲೆಯ ನಾಯರಿ ಸಮೂಹವನ್ನು ಹಿಂದುಳಿದ ಪಂಗಡಗಳಲ್ಲಿ ಸೇರಿಸುವ ಬಗ್ಗೆ ನಾನು ವಿಧಾನ ಸಭೆಗೆ ಅರ್ಜಿಯನ್ನು ಒಪ್ಪಿಸುತ್ತೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ಮಾನ್ಯ ಅಧ್ಯಕ್ಷರೇ, ಬೆಳಗಾಂ ಜಿಲ್ಲೆಯ ಯಮಕಣಮರಡಿ ಹರಿಶಿಪ್ಪ ಜನಾಂಗಕ್ಕೆ ಭೂಮಿ ಕೊಡುವ ಬಗ್ಗೆ ಅರ್ಜಿಯನ್ನು ನಾನು ಸದನಕ್ಕೆ ಒಪ್ಪಿಸುತ್ತೇನೆ.

ಅಧ್ಯಕ್ಷರು.—ಒಪ್ಪಿಸಲಾಗಿದೆ.

ಶ್ರೀ ವಾಟಾಳ್ ನಾಗರಾಜ್.—ಮಾನ್ಯ ಅಧ್ಯಕ್ಷರೇ ಬೆಳಗಾಂ ಮಹಾನಗರ ಪಾಲಿಕೆಯ ಮೇಲೆ ಮರಾಠಿ ಧ್ವಜವನ್ನು ಹಾರಿಸಿದ್ದಾರೆ. ಮತ್ತು ನಾನು ತಮಗೆ ಈ ಬಗ್ಗೆ ಒಂದು ಪತ್ರ ಬರೆದು ಸಹ ತಿಳಿಸಿದ್ದೇನೆ. ಅಲ್ಲಿ.....

ಅಧ್ಯಕ್ಷರು.—ನಾನು ತಮ್ಮನ್ನು ಕರೆಯುತ್ತೇನೆ. ಈಗ ದಯಮಾಡಿ ತಾವು ಕುಳಿತುಕೊಳ್ಳಬೇಕು.